4) ಮಂಗಳೂರು ವಿಮಾನ ನಿಲ್ದಾಣದ ಅಭಿವೃದ್ಧಿ

SRI BLASIUS M.D' SOUZA (Manglore): Madam deputy speakers The Managlore Airport is one of the busiest with heavy air traffic, Its importance has relevence to the growth and the future growth of south Canara district in days to come. The Mangalore Airport which is situated at Bajpe has an airstrip of about 6500 at and as such Boeing 737 would just land. The Airport is situated on the top of a hill and is like a table top with both side having a deep fall, consequently if there is technical or human error while landing or take off there is every possiblity of the plane over shooting the runway and is likely to fall in the valley. In view of making the runway safer and in order to enable ther airbus to land, a longor runway of about 11000 ft. was proposed parallel to the present runway.

The civil Aviation authority had deposited Rs. 154/lakhs with the acquiring authority in Mangalore. The land acquisition for the runway is at the award stage. I reliably understand that the Civil Aviation Authority have written to the acquisition authorities at Mangalore to drop the acquisition proposal and refund the amount.

I request the Hon'ble Chief Minister to take up the matter with the concerned authorities to continue the acquisition proceding as the matter is not only urgent but very series subject for the development, which is expected in the State in general and Dakshina Kannada district in particular.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಈ ಮಂಗಳೂರು ವಿಮಾನ ನಿಲ್ದಾಣದ ಭೂಸ್ವಾಧೀನ ಬಗ್ಗೆ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಮತ್ತು ಯಾರು ನಿರ್ವಸಿತರಾಗುತ್ತಾರೋ ಅಂಥವರಿಗೆ ಪುನರ್‌ವಸತಿ ಕಲ್ಪಿಸುವುದಕ್ಕೆ ಒಂದು ಸಮಿತಿಯನ್ನು ಈಗಾಗಲೇ ನೇಮಕ ಮಾಡಲಾಗಿದೆ. ಆದ್ದರಿಂದ ಈ ಬಗ್ಗೆ ಕರ್ನಾಟಕ ಸರ್ಕಾರ ಬೇಕಾದ ಕ್ರಮವನ್ನು ತೆಗೆದುಕೊಂಡಿದೆ. ಈ ವಿಮಾನ ನಿಲ್ದಾಣದ ವಿಸ್ತರಣೆಯನ್ನು ಕೈಬಿಡಬೇಕೆಂಬ ವರ್ತಮಾನ ಕೇಂದ್ರ ಸರ್ಕಾರದಿಂದ ಬಂದಿಲ್ಲ. ಈ ವಿಮಾನ ನಿಲ್ದಾಣ ವಿಸ್ತರಣೆಯಾಗಬೇಕೆಂದು ನಾವು ಮುಂದುವರೆಯುತ್ತೇವೆ ಮತ್ತು ಕೇಂದ್ರ ಸರ್ಕಾರಕ್ಕೆ ಕೂಡ ನಾವು ಒತ್ತಾಯ ಮಾಡುತ್ತೇವೆ.

5) ಹುಕ್ಕೇರಿ ತಾಲ್ಲೂಕಿನ ದಡ್ಡಿ ಮಂಡಲ ಪಂಚಾಯಿತಿ ವ್ಯಾಪ್ತಿಯ ಕಾಮಗಾರಿ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಉಪಾಧ್ಯಕ್ಷೆಯವರೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ದಡ್ಡಿ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ಮಾಡದೇ ಇರುವುದರಿಂದ ಸುಮಾರು 11 ಹಳ್ಳಿಗಳ ಜನರು ದಿನಾಂಕ 20-3-1991ರಂದು ದಡ್ಡಿ ಕ್ರಾಸ್ ಹತ್ತಿರ ರಾಷ್ಟ್ರೀಯ ಹೆದ್ದಾರಿಯ ಮೇಲೆ ಅನಿರ್ದಿಷ್ಟ ಕಾಲದವರೆಗೆ ಬಂದ್ ಆಚರಣೆ ಮಾಡುವುದಾಗಿ ನಿಶ್ಚಯಿಸಿರುತ್ತಾರೆ. ಮುಖ್ಯವಾಗಿ ಈ ಭಾಗದಲ್ಲಿ ಕೆಳಕಂಡ ತೊಂದರೆಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ.

1. ಸರಿಯಾದಂತಹ ವಿದ್ಯುತ್ ಪೂರೈಕೆ ಇಲ್ಲ
2. ದಡ್ಡಿ ಹತ್ತಿರ ಘಟಪ್ರಭಾ ನದಿಗೆ ಬ್ರಿಡ್ಜ್‌ಮ್ ಬಂಡಾರ ಕಟ್ಟುವುದು,
3. ಸಲಾಮವಾಡಿ ಯಾತ ನೀರಾವರಿ,
4. ದಡ್ಡಿ ನಾಗನೂರು ಯಾತ ನೀರಾವರಿ
5. ರೊಂಡಗಟ್ಟಿ ಬೆಳಂಕಿ ಮತ್ತು ಕೋಟ ಗ್ರಾಮಗಳಿಗೆ ನೀರಿನ ಯೋಜನೆಯ ಅನುಷ್ಠಾನ
6. ದೊಡ್ಡಿ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ನಿರ್ಮಾಣ
7. ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳ ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವಲ್ಲಿ ವಿಫಲತೆ
8. ದಡ್ಡಿ ಗ್ರಾಮದಲ್ಲಿ ಬಸ್ ನಿಲ್ದಾಣದ ನಿರ್ಮಾಣ
9. ಗುಡಗನ ಹಟ್ಟಿ ಹಾಗೂ ಇನ್ನುಳಿದ ಗ್ರಾಮಗಳಿಗೆ ವಿಶ್ವ ಆಹಾರ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣ ಮಾಡದೇ ಇರುವುದು.

ಈ ಎಲ್ಲಾ ವಿಷಯಗಳನ್ನು ಸಾರ್ವಜನಿಕ ಹಿತರದೃಷ್ಟಿಯಿಂದ ತ್ವರಿತವಾಗಿ ಪೂರ್ಣ ಮಾಡುವಂತೆ ಜನರ ಬೇಡಿಕೆ ಇದ್ದು ಹೆಚ್ಚಾಗಿ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ಕೆಲಸದಲ್ಲಿ ನಿರ್ಲಕ್ಷ್ಯತನದ ಹಿನ್ನೆಲೆಯಲ್ಲಿ ಈ ಬಂದನ್ನು ಆಚರಿಸುತ್ತಿದ್ದುದು ಕಂಡು ಬರುತ್ತದೆ ಇನ್ನುಳಿದ ಇಲಾಖೆಗಳಿಗೆ ಕೂಡಾ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆದೇಶವನ್ನು ಕೊಟ್ಟು ಹಾಗೂ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯದರ್ಶಿ ಮತ್ತು ಬೆಳಗಾವಿಯ ಜಿಲ್ಲಾಧಿಕಾರಿಗಳು ಜಂಟಿಯಾಗಿ ಸ್ಥಳಕ್ಕೆ ಭೇಟಿ ಕೊಟ್ಟು ತೊಂದರೆಯನ್ನು ನಿವಾರಿಸುವಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಲು ಒತ್ತಾಯಿಸುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೆ ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಯನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ಪಶುಸಂಗೋಪನೆ ಮತ್ತು ಹೈನುಗಾರಿಕಾ ಮಂತ್ರಿಗಳವರ ಗಮನಕ್ಕೆ ತರುತ್ತೇನೆ.

6) ಬಂಟ್ವಾಳ ಪುರಸಭೆ ವ್ಯಾಪ್ತಿಯ ಮಫತ್‌ಲಾಲ್ ಫೈವುಡ್ ಇಂಡಸ್ಟ್ರೀಸ್ ಜಮೀನಿನ ಮಾರಾಟ

ಶ್ರೀ ಬಿ. ರಾಮನಾಥ್ : ಬೆಂಗಳೂರು ನಗರ ಹಾಗೂ ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಒಳಪಟ್ಟ ಮಫತ್‌ಲಾಲ್ ಫೈವುಡ್ ಇಂಡಸ್ಟ್ರೀಸ್ (ಲಿ) ನ್ನು ಕಳೆದ 16 ತಿಂಗಳಿಂದಲೂ ರೋಗಗ್ರಸ್ಥ ಕಾರ್ಖಾನೆ ಎಂದು ಪರಿಗಣಿಸಿ ಮುಚ್ಚಲ್ಪಟ್ಟಿದೆ. ಅಲ್ಲಿ ಕೆಲಸ ಮಾಡುತ್ತಿರುವ ಅನೇಕ ನೌಕರರು ಬೀದಿ ಪಾಲಾಗಿದ್ದಾರೆ. ಈ ರೋಗಗ್ರಸ್ಥ ಕಾರ್ಖಾನೆಯನ್ನು ಪುನರ್ಚೇತನಗೊಳಿಸಲು ಆರ್ಥಿಕ ವ್ಯವಸ್ಥೆಗೆ ಬಿ.ಐ.ಎಫ್.ಆರ್. ಇವರು ಕಾರ್ಖಾನೆಯ ವಶದಲ್ಲಿರುವ ಹೆಚ್ಚುವರಿ ಜಮೀನನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಡುವಂತೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸೂಚನೆ ಕೊಟ್ಟಿರುತ್ತಾರೆ. ಸರಕಾರವು ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ನೌಕರರ ಹಿತದೃಷ್ಟಿಯಿಂದ ಕಾರ್ಖಾನೆಯ ಹೆಚ್ಚುವರಿ ಜಮೀನನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿ ಕೊಡುವುದೇ.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಣೆಯವರೆ,